ಅ) ಹಾಗಿದ್ದಲ್ಲಿ, ಈ ಏತ ನೀರಾವರಿ ಕೆಲಸವನ್ನು ಇನ್ನೂ ಪೂರ್ಣಗೊಳಿಸದಿರಲು ಕಾರಣಗಳೇನು ಹಾಗೂ ಯಾವಾಗ ಪೂರ್ಮಗೊಳಿಸಲಾಗುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):

ಅ) ಬಂದಿದೆ.

ಆ) ಏತ ನೀರಾವರಿ ನಿಗಮಗಳು ಸ್ಥಾಪನೆಯಾದ ನಂತರ ಈ ಯೋಜನೆಯನ್ನು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಕೈಗೊಳ್ಳಲು ಅಂದಾಜು ಪಟ್ಟಿಯನ್ನು ದಿನಾಂಕ : 30-7-87ರಂದು ಸದರಿ ನಿಗಮಕ್ಕೆ ಈ ಇಲಾಖೆಯಿಂದ ಹಸ್ತಾಂತರಿಸಲಾಯಿತು. ಸದರಿ ಯೋಜನೆಯು ಸಾಧ್ಯವಿಲ್ಲವೆಂದು ಕಂಡು ಬಂದಿದ್ದರಿಂದ ಮತ್ತೊಮ್ಮೆ ಈ ಬಗ್ಗೆ ಪರಿಶೀಲಿಸುವ ಹಂತದಲ್ಲಿತ್ತು. ಈ ಸಂದರ್ಭದಲ್ಲಿ 1995ರಲ್ಲಿ ಏತ ನೀರಾವರಿ ನಿಗಮಗಳನ್ನು ಮುಚ್ಚಿದ್ದರಿಂದ ಸದರಿ ಯೋಜನೆಯು ಪುನಃ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಲಾಗಿದೆ. ಯೋಜನೆಯ ಬಗ್ಗೆ ಸಣ್ಣ ನೀರಾವರಿ ಇಲಾಖೆಯಿಂದ ಮರು ಪರಿಶೀಲಿಸಿ ಆರ್ಥಿಕವಾಗಿ ಮತ್ತು ತಾಂತ್ರಿಕ ಶಕ್ಯವೆಂದು ಕಂಡುಬಂದಲ್ಲಿ ಯೋಜನೆಯನ್ನು ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ತೊದಲಬಾಗಿ ಏತ ನೀರಾವರಿ ಯೋಜನೆ

85 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ತೊದಲಬಾಗಿ ಏತ ನೀರಾವರಿ ಯೋಜನೆ ಯಾವಾಗ ಪ್ರಾರಂಭವಾಗಿದೆ.

ಆ) ಈ ಯೋಜನೆಯ ಅಂದಾಜು ವೆಚ್ಚ ವೆಷ್ಟು;

ಇ) ಈವರೆಗೆ ಈ ಯೋಜನೆಯಡಿಯಲ್ಲಿ ಎಷ್ಟು ಹಣ ಖರ್ಚಾಗಿದೆ;

ಈ) ಯೋಜನೆಯನ್ನು ಮುಕ್ತಾಯ ಗೊಳಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಉ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಎಷ್ಟು ಹಣ ಯೋಜನೆಗೆ ಒದಗಿಸಲಾಗಿದೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು) :

ಅ) ಅಡಿಹುಡಿ ತೊದಲಬಾಗಿ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ದಿನಾಂಕ : 25-8-92 ರಂದು ಪ್ರಾರಂಭಿಸಲಾಗಿದೆ.

ಆ) ಈ ಯೋಜನೆಯ ಅಂದಾಜು ವೆಚ್ಚ 324.532 ಲಕ್ಷ ರೂ.ಗಳು

ಇ) ಈವರೆಗೆ ಈ ಯೋಜನೆಗೆ 89.90 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಈ) ಇದೆ.

ಉ) 94-95ನೇ ಸಾಲಿನಲ್ಲಿ ಈ ಯೋಜನೆಗೆ ಒಂದು ಲಕ್ಷರೂ.ಗಳು ಅನುದಾನವನ್ನು ಒದಗಿಸಲಾಗಿದೆ.

ಮಂಡ್ಯ ಜಿಲ್ಲೆಯ ಕೆರೆಗಳ ಅಭಿವೃದ್ಧಿ ಕಾರ್ಯ

86 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಎಷ್ಟು ಕೆರೆಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ;

ಆ) ಹಾಗೂ ಅವುಗಳ ಕಾರ್ಯ ಯಾವ ಯಾವ ಹಂತದಲ್ಲಿವೆ;

ಇ) ಕಡಿಲವಾಗಿಲು ಕೆರೆ, [illegible]ದ ಹಳ್ಳಿ ಕೆರೆ ಸುಜ್ಜಲೂ ಕೆರೆ, ನಗರಕೆರೆ ಕೆರೆ ಅಭಿವೃದ್ಧಿ ಯಾವ ಹಂತದಲ್ಲಿದೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು) :

ಅ) ಹತ್ತು ಕೆರೆಗಳ ಅಭಿವೃದ್ಧಿ ಕಾರ್ಯವನ್ನು ತೆಗೆದುಕೊಳ್ಳಲಾಗಿದೆ.

ಆ) ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ

ಇ) ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.